# 'ಯುಗಾದಿ'ಗೆ ಪ್ರಸಾದ!

ಅಶೋಕ್ ಖೇಣಿ, ಅರ್ಜುನ್ ಸರ್ಜಾ, ಇಳಯರಾಜಾ ಕಾಂಬಿನೇಷನ್‌ನ 'ಪ್ರಸಾದ್' ಚಿತ್ರ ಯುಗಾದಿ ಹಬ್ಬದ ಸಂದರ್ಭದಲ್ಲಿ ತೆರೆಕಾಣುತ್ತಿದೆ. ಎನ್. ಲಕ್ಷ್ಮೀನಾರಾಯಣ್ ಅವರ ಅಂತರರಾಷ್ಟ್ರೀಯ ಮನ್ನಣೆ ಪಡೆದ 'ನಾಂದಿ' ಚಿತ್ರದ ನಂತರ ವಾಕ್–ಶ್ರವಣ ದೋಷದ ಸಮಸ್ಯೆಯನ್ನು ಪರಿಣಾಮಕಾರಿಯಾಗಿ ಚಿತ್ರಿಸಿರುವ ಕನ್ನಡ ಚಿತ್ರ 'ಪ್ರಸಾದ್' ಎನ್ನಲಾಗಿದೆ. 59ನೇ ರಾಷ್ಟ್ರೀಯ ಪ್ರಶಸ್ತಿಗಳ ಸ್ಪರ್ಧೆಯಲ್ಲಿ ತೀವ್ರ ಸ್ಪರ್ಧೆ ಒಡ್ಡಿದ ಚಿತ್ರವಿದು.

'ಪ್ರಸಾದ್' ಚಿತ್ರಕ್ಕೆ ಸಂಬಂಧಿಸಿದಂತೆ ಕೆಲವು ವಿಶೇಷಗಳಿವೆ. ಉದ್ಯಮಿ ಅಶೋಕ್ ಖೇಣಿ ನಿರ್ಮಾಣದ ಮೊದಲ ಚಿತ್ರವಿದು. ತುಂಬಾ ದಿನಗಳ ನಂತರ ಅರ್ಜುನ್ ಸರ್ಜಾ ನಟಿಸಿರುವ ಕನ್ನಡ ಚಿತ್ರವೆನ್ನುವುದು ಇನ್ನೊಂದು ವಿಶೇಷ. ಸ್ವತಃ ಅರ್ಜುನ್ ಹೇಳುವಂತೆ– 'ಪ್ರಸಾದ್, ಅವರ ಹೃದಯಕ್ಕೆ ಹತ್ತಿರವಾದ ಚಿತ್ರ'. ಭಾರತೀಯ ಚಿತ್ರರಂಗದ ಸಂಗೀತ ಮಾಂತ್ರಿಕ ಇಳಯರಾಜಾ ಮನಸಾರೆ ಸಂಗೀತ ನೀಡಿರುವುದು 'ಪ್ರಸಾದ್'ನ ಮತ್ತೊಂದು ವಿಶೇಷ. ಐಟಂ ಗರ್ಲ್ ಎಂದು ಹೆಸರಾಗಿರುವ ಮಾಧುರಿ ಭಟ್ಟಾಚಾರ್ಯ ಗೌರಮ್ಮನಂಥ ಗೃಹಿಣಿಯ ಪಾತ್ರದಲ್ಲಿ ನಟಿಸಿರುವುದೂ ವಿಶೇಷವೇ.

ಬಾಲಕನೊಬ್ಬ ತನ್ನ ಅಂಗವೈಕಲ್ಯದ ನಡುವೆಯೇ ಉತ್ತಮ ಸಾಧನೆ ಮಾಡುವುದು 'ಪ್ರಸಾದ್' ಚಿತ್ರದ ತಿರುಳು. ಬಾಲಕ ಪ್ರಸಾದನ ಪಾತ್ರದಲ್ಲಿ ನಟಿಸಿರುವ ಸಂಕಲ್ಪ್ ಎನ್ನುವ ಹುಡುಗ ನಿಜ ಜೀವನದಲ್ಲೂ ಮೂಕ, ಕಿವುಡ. ಆದರೆ, ಈ ಹುಡುಗನಿಗೆ ಖೇಣಿ ಅವರು ಉನ್ನತ ಚಿಕಿತ್ಸೆ ಕೊಡಿಸಿದ್ದು, ಸಂಕಲ್ಪ್ ನಿಧಾನವಾಗಿ ಮಾತಿನ ಲೋಕಕ್ಕೆ ತೆರೆದುಕೊಳ್ಳುವ ಸಾಧ್ಯತೆ ಇದೆಯಂತೆ.





# ರೂಪಿಕಾ ಟಪ್ಪಾಂಗುಚ್ಚಿ

"ಈಗಷ್ಟೇ ಒಂದು ತೆಲುಗು ಸಿನಿಮಾ ಮುಗಿಸಿದ್ದೇನೆ, ಹೊಸ ತಮಿಳು ಚಿತ್ರವೊಂದನ್ನು ಒಪ್ಪಿಕೊಂಡಿದ್ದೇನೆ. ಕನ್ನಡದಲ್ಲಿ 'ಬೀರ' ಚಿತ್ರ ತೆರೆಗೆ ಸಿದ್ಧವಾಗಿದೆ"– ಹೀಗೆ ತಮ್ಮ ತ್ರಿಭಾಷಾ ಸಾಹಸವನ್ನು ಬಣ್ಣಿಸಿದ್ದು ರೂಪಿಕಾ ಎನ್ನುವ ಚಿನಕುರಳಿ ಹುಡುಗಿ. 'ಚೆಲುವಿನ ಚಿಲಿಪಿಲಿ' ನಂತರ ಆರಕ್ಕೇರದ ರೂಪಿಕಾ, ಸಿನಿಮಾದೊಂದಿಗೆ ಕಾಲೇಜನ್ನೂ ನಿಭಾಯಿಸುತ್ತಿರುವ ಜಾಣೆ. 'ಬೀರ' ಚಿತ್ರದ ಪರೀಕ್ಷೆಯೊಂದಿಗೆ ಅವರು ಪಿಯುಸಿ ಪರೀಕ್ಷೆಯನ್ನೂ ಬರೆದಿದ್ದಾರೆ. ಎರಡರ ಫಲಿತಾಂಶದ ಬಗ್ಗೆಯೂ ಅವರಿಗೆ ಆಶಾಭಾವವಿದೆ.

'ಬೀರ' ಚಿತ್ರದಲ್ಲಿ ರೂಪಿಕಾ ಅವರದು ಹಳ್ಳಿ ಹುಡುಗಿಯ ಪಾತ್ರವಂತೆ. ಪಾತ್ರದ ಬಗ್ಗೆ ಹೆಚ್ಚು ಮಾತನಾಡದ ಆಕೆ, ಸಿನಿಮಾದ ಹಾಡುಗಳ ಬಗ್ಗೆ ಉತ್ಸಾಹದಿಂದ ಮಾತನಾಡಿದರು. 'ಸಿನಿಮಾ ನೋಡಲಿಕ್ಕೆ ಗೀತೆಗಳು ಆಹ್ವಾನ ಪತ್ರಿಕೆಯಂತಿವೆ. ಮೊದಲ ಬಾರಿಗೆ ನಾನು ಟಪ್ಪಾಂಗುಚ್ಚಿ ಗೀತೆಯೊಂದರಲ್ಲಿ ನಟಿಸಿದ್ದೇನೆ' ಎನ್ನುವಾಗ ರೂಪಿಕಾ ಕಣ್ಣುಗಳಲ್ಲೂ ಟಪ್ಪಾಂಗುಚ್ಚಿ ಉಮೇದಿಯಿತ್ತು.

ಸಂಜಯ್ 'ಬೀರ' ಚಿತ್ರದ ನಿರ್ದೇಶಕರು. ಸತ್ಯ ಅಲಿಯಾಸ್ ಸರ್ದಾರ್ ಸತ್ಯ ಚಿತ್ರದ ನಾಯಕ. ದಾವಣಗೆರೆಯ ಅಯೂಬ್ ಚಿತ್ರದ ನಿರ್ಮಾಪಕರು. ಚಿತ್ರದ ಬಗ್ಗೆ ಅವರು ಎಷ್ಟರಮಟ್ಟಿಗೆ ಕಾಳಜಿ ವಹಿಸಿದ್ದಾರೆಂದರೆ, ಸಿನಿಮಾ ಸಿದ್ಧವಾದ ನಂತರವೂ ಕೆಲವು ದೃಶ್ಯಗಳನ್ನು ರೀಶೂಟ್ ಮಾಡಲು ನಿರ್ದೇಶಕರಿಗೆ ಹಸಿರು ನಿಶಾನೆ ತೋರಿಸಿದ್ದಾರೆ. 'ದುಡ್ಡು ಮುಖ್ಯವಲ್ಲ, ಸಿನಿಮಾ ಚೆನ್ನಾಗಿ ಬರಬೇಕು' ಎನ್ನುವುದು ಅವರ ಆಶಯವಂತೆ. ಅಂದಹಾಗೆ, ರೋಚಕ ಗೀತೆಯೊಂದರಲ್ಲಿ ಕಾಣಿಸಿಕೊಂಡಿರುವ ಶುಭಾ ಪೂಂಜಾ 'ಬೀರ' ಚಿತ್ರದ ಗ್ಲಾಮರ್ ಹೆಚ್ಚಿಸಿದ್ದಾರಂತೆ.

# ನಾನಿನ್ನೂ ಬದುಕಿದ್ದೇನೆ...



ಮುನ್ನೂರಕ್ಕೂ ಹೆಚ್ಚಿನ ಚಿತ್ರಗಳಲ್ಲಿ ನಟಿಸಿರುವ ಹಿರಿಯ ನಟ ಚೇತನ್ ರಾಮರಾವ್ ತಣ್ಣನೆ ದನಿಯಲ್ಲಿ ಹೇಳಿದರು– 'ನಾನಿನ್ನೂ ಬದುಕಿದ್ದೇನೆ'. 'ಮನಸಿನ ಪುಟದಲಿ' ಚಿತ್ರದ ಸುದ್ದಿಗೋಷ್ಠಿಯಲ್ಲಿ ಮಾತನಾಡುತ್ತಿದ್ದ ಅವರ ಮಾತುಗಳಲ್ಲಿ ವಿಷಾದವಿತ್ತು.

'ನಟಿಸುತ್ತಿರುವಾಗಲೇ ಸಾಯಬೇಕು ಎನ್ನೋದು ನನ್ನಾಸೆ. ನಾನಿಲ್ಲಿಗೆ ಪ್ರಚಾರ ಗಿಟ್ಟಿಸಿಕೊಳ್ಳಲಿಕ್ಕಾಗಿ ಬಂದಿಲ್ಲ. ಚೇತನ್ ರಾಮರಾವ್ ಇನ್ನೂ ಬದುಕಿದ್ದಾರೆ, ಮೈಸೂರಿನಲ್ಲಿದ್ದಾರೆ ಎಂದು ಹೇಳಲಿಕ್ಕಾಗಿಯೇ ಇಲ್ಲಿಗೆ ಬಂದಿದ್ದೇನೆ. ನಾನೊಬ್ಬನಿದ್ದೇನೆ ಎನ್ನುವುದು ನಿಮ್ಮ ನೆನಪಿನಲ್ಲಿರಲಿ. ನನಗೆ ಕೆಲಸ ಬೇಕು' ಎಂದರು. ಅವರ ಮಾತಿನಲ್ಲಿ ಯಾರ ಪ್ರಸ್ತಾಪವೂ ಇರಲಿಲ್ಲ. ಆದರೆ, ಹಿರಿಯ ಕಲಾವಿದರನ್ನು ನಿರ್ಲಕ್ಷಿಸಿರುವ ಇವತ್ತಿನ ಚಿತ್ರೋದ್ಯಮದ ಆತ್ಮಸಾಕ್ಷಿಯ ವಿಶ್ಲೇಷಣೆಗೆ ರಾಮರಾಯರ ಮಾತು ಒತ್ತಾಯಿಸುವಂತಿತ್ತು.

'ಮನಸಿನ ಪುಟದಲಿ' ಚಿತ್ರದಲ್ಲಿ ರಾಯರು ನಾಯಕಿಯ ತಂದೆಯ ಪಾತ್ರದಲ್ಲಿ ನಟಿಸಿದ್ದಾರಂತೆ. ಪ್ರೇಮ ವೈಫಲ್ಯದ ಸುಳಿಯಿಂದ ಹೊರಬರುವ ನಾಯಕಿ, 'ಜೀವನಕ್ಕೆ ಹಲವು ಆಯಾಮಗಳಿವೆ' ಎನ್ನುವುದನ್ನು ಸಾರುವ ಚಿತ್ರ ಇದಂತೆ. ಪ್ರಶಾಂತ ಕೆ. ಶೆಟ್ಟಿ ನಿರ್ದೇಶನದ ಈ ಚಿತ್ರದ ನಾಯಕಿ ರಕ್ಷಾ. ಮೈಸೂರಿನ ಈ ಹುಡುಗಿ ರ್‍ಯಾಂಪ್ ಜಗತ್ತಿನಿಂದ ಗಾಂಧಿನಗರಕ್ಕೆ ಬಂದಿದ್ದಾರೆ. ಚೊಚ್ಚಲ ಅವಕಾಶವೇ ನಾಯಕಿ ಪ್ರಧಾನ ಚಿತ್ರವಾಗಿರುವುದು ಅವರಿಗೆ ಖುಷಿ ತಂದಿದೆ. ಕಿಶನ್ ಭಂಡಾರಿ ಎನ್ನುವ ಹೊಸ ಹುಡುಗ ಚಿತ್ರದ ನಾಯಕ. ಮೈಸೂರಿನ ಸುನಂದಾ ಶಾಮಣ್ಣಶೆಟ್ಟಿ ಚಿತ್ರದ ನಿರ್ಮಾಪಕಿ.

■ ರಘು